ಶ್ರೀ ಆರ್ ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ಹೌದು.

ಆ) 1996-97ನೇ ಸಾಲಿಗೆ ಹೆಬ್ಬೂರು ಪೊಲೀಸ್ ಠಾಣೆಯ 7 ಹೆಡ್ ಕಾನ್ಸ್‌ಟೇಬಲ್ ಹಾಗೂ 21 ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ವಸತಿ ಗೃಹ ನಿರ್ಮಾಣದ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡಲಾಗಿದೆ. ಈ ವಸತಿ ನಿರ್ಮಾಣಕ್ಕೆ ಹಣವನ್ನು ಹೊಂದಿಸಿಕೊಂಡು ತ್ವರಿತವಾಗಿ ಕೈಗೊಳ್ಳುವಂತೆ ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ನಿಗಮಕ್ಕೆ ತಿಳಿಸಲಾಗಿದೆ.

ವಿಷಯ: ಕೊಡಗು ಜಿಲ್ಲೆಯಲ್ಲಿ ಅಬಕಾರಿ ಹರಾಜಿನಿಂದ ಬಂದ ಆದಾಯ

2828 (3445)

ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ 1994-95, 1995-96 ಮತ್ತು 1996-97ನೇ ಸಾಲಿನಲ್ಲಿ ಅಬಕಾರಿ ಹರಾಜಿನಲ್ಲಿ ಸರ್ಕಾರಕ್ಕೆ ಪಾವತಿಯಾದ ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಅಬಕಾರಿ ಗುತ್ತಿಗೆದಾರರಿಂದ ಮೇಲಿನ ವರ್ಷಗಳಲ್ಲಿ ವಸೂಲಿಯಾಗಬೇಕಾಗಿರುವ ಹಣ ಎಷ್ಟು?

ಇ) ಅಬಕಾರಿ ಗುತ್ತಿಗೆದಾರರಿಂದ ಬಾಕಿಯನ್ನು ವಸೂಲಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) (ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ತಾಲ್ಲೂಕು | 94-95 | 95-96 | 96-97 |
|---|---|---|---|---|
| 1) | ಮಡಿಕೇರಿ | 149.28 | 154.40 | 181.90 |
| 2) | ಸೋಮವಾರಪೇಟೆ | 312.00 | 346.08 | 456.74 |

| | | | | |
|---|---|---|---|---|
| 3) | ವಿರಾಜಪೇಟೆ | 376.78 | 413.76 | 606.80 |
| | ಒಟ್ಟು | 838.06 | 924.24 | 1245.50 |

ಆ) ರೂ. 6,89,800-00ಗಳು ಮಡಿಕೇರಿ ತಾಲ್ಲೂಕಿಗೆ 1996-97ನೇ ಸಾಲಿಗೆ ಸಂಬಂಧಿಸಿದಂತೆ ವಸೂಲಿಯಾಗಬೇಕಾಗಿದೆ.

ಇ) ಅಬಕಾರಿ ಆಯುಕ್ತರಿಗೆ ಬಾಕಿಯನ್ನು ವಸೂಲಿ ಮಾಡಲು ಸೂಚಿಸಲಾಗಿದೆ.

ವಿಷಯ: ಮಡಿಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕ ಇಲ್ಲದ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ.

2829 (3444)

ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಡಿಕೇರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯಲು ಎಷ್ಟು ಗ್ರಾಮಗಳು ಬಾಕಿ ಇವೆ?

2) ವಿದ್ಯುತ್ ಸಂಪರ್ಕ ಪಡೆಯದ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ದೊರಕಿಸಿಕೊಡಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

1) ಮಡಿಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸದಿರುವ ಗ್ರಾಮಗಳು ಯಾವುವೂ ಇರುವುದಿಲ್ಲ. ಆದರೆ, 1991ರ ಜನಗಣತಿಯ ರಂತೆ 86 ಉಪ ಗ್ರಾಮಗಳಿಗೆ ಮಾತ್ರ ವಿದ್ಯುತ್ ಸಂಪರ್ಕ ಕಲ್ಪಿಸುವುದು ಬಾಕಿ ಇರುತ್ತದೆ.

2) ವಿದ್ಯುತ್ ಸಂಪರ್ಕ ಪಡೆಯದ ಉಪ ಗ್ರಾಮಗಳಿಗೆ ಮಂಡಳಿಗೆ ಒದಗುವ ಆರ್ಥಿಕ ನೆರವು ಹಾಗೂ ಸಾಮಗ್ರಿಗಳ ಸರಬರಾಜು ಮತ್ತು ಸಿಬ್ಬಂದಿಯ ಸೌಲಭ್ಯಗಳನ್ನು ಅವಲಂಬಿಸಿ ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ಎಲ್ಲಾ ಉಳಿದಿರುವ ಉಪ ಗ್ರಾಮಗಳಿಗೂ ವಿದ್ಯುತ್ ಒದಗಿಸಲಾಗುವುದು. ಉಪ ಗ್ರಾಮದ ನಿವಾಸಿಗಳು ಬೀದಿ ದೀಪ ತೆಗೆದುಕೊಳ್ಳಲು ಮುಂದೆ ಬಂದಿರುವ ಕಡೆ ಮಂಡಳಿಯು ವಿದ್ಯುತ್ ಒದಗಿಸಲು ಕ್ರಮ ಕೈಗೊಂಡಿರುತ್ತದೆ.

ವಿಷಯ: ಕಾರ್ಕಳ ತಾಲ್ಲೂಕಿನಲ್ಲಿ ಮಿನಿ ವಿದ್ಯುತ್ ಸ್ಥಾವರದ ಯೋಜನೆ